# ಭಾರತದ ಒಟಿಟಿಗೆ ವಿದೇಶಿ ಪ್ರೇಕ್ಷಕರೂ ಫಿದಾ




'ಫ್ರಮ್ ಇಂಡಿಯಾ ಟು ದಿ ವರ್ಲ್ಡ್' ಎಂಬ ವರದಿಯೊಂದನ್ನು ರೇಜರ್‌ಪೇ ಎಂಬ ಹಣಕಾಸು ಸಂಸ್ಥೆ ಇತ್ತೀಚೆಗೆ ನೀಡಿದೆ. ಇದು ಅಂತರರಾಷ್ಟ್ರೀಯ ಮಟ್ಟದ ವಹಿವಾಟಿನ ಸೂಕ್ಷ್ಮಗಳನ್ನು ನೀಡುವಂತಹ ವರದಿ. ಇದರ ಪ್ರಕಾರ, ಕಳೆದ ಎರಡು ವರ್ಷಗಳಲ್ಲಿ ಭಾರತದ ಒಟಿಟಿ ವೇದಿಕೆಗಳಿಗೆ ಅಂತರರಾಷ್ಟ್ರೀಯ ವೀಕ್ಷಕರಿಂದ ಬಂದಿರುವ ಆದಾಯದಲ್ಲಿ ಶೇ. 194ರಷ್ಟು ಏರಿಕೆ ಆಗಿದೆ.

ಏಪ್ರಿಲ್ 1, 2021ರಿಂದ ಜುಲೈ 21, 2023ರ ಅವಧಿಯಲ್ಲಿ ಒಂದು ಕೋಟಿಯಷ್ಟು ಸಂಖ್ಯೆ ವಹಿವಾಟು ರೇಜರ್‌ಪೇ ವೇದಿಕೆಯ ಮೂಲಕ ಭಾರತೀಯ ಒಟಿಟಿಗಳಿಗೆ ಆಗಿದೆ. ಅದರಲ್ಲೂ 2022–23ರ ಅವಧಿಯಲ್ಲಿ ಆನ್‌ಲೈನ್ ಪಾವತಿ ಮಾಡಿ, ಒಟಿಟಿಯಲ್ಲಿ ಸಿನಿಮಾಗಳನ್ನು ನೋಡುವವರ ಸಂಖ್ಯೆ ಗಣನೀಯವಾಗಿ ಏರಿಕೆಯಾಗಿದೆ.

'ಆರ್‌ಆರ್‌ಆರ್', 'ಕೆಜಿಎಫ್2' ಸಿನಿಮಾಗಳನ್ನು ಒಟಿಟಿಗಳಲ್ಲಿ ನೋಡಲು ಮುಗಿಬಿದ್ದ ವಿದೇಶಿಗರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಿತ್ತು. ಇನ್ನೊಂದು ಆಸಕ್ತಿಕರ ವಿಷಯವೆಂದರೆ, ಹಾಲಿವುಡ್ ಚಿತ್ರಗಳನ್ನು ಒಟಿಟಿಯಲ್ಲಿ ನೋಡುವ ಭಾರತೀಯರ ಸಂಖ್ಯೆ ಮತ್ತೂ ಹೆಚ್ಚಾಗಿದೆ. ಆ ಸಿನಿಮಾಗಳಿಗೆ ಬಂದಿರುವ ವಿದೇಶಿ ಪ್ರೇಕ್ಷಕರ ಒಟಿಟಿ ಆದಾಯದಲ್ಲಿ ಶೇ. 361ರಷ್ಟು ಏರಿಕೆ ಆಗಿರುವುದು ಬಾಯಿಯ ಮೇಲೆ ಬೆರಳಿಡುವಂತೆ ಮಾಡುತ್ತದೆ.

ಒಂದು ಕಡೆ ಆದಾಯದಲ್ಲಿ ಈ ಪರಿಯ ಹೆಚ್ಚಳ ಆಗುತ್ತಿದೆಯಲ್ಲ ಎಂದುಕೊಳ್ಳುವಾಗಲೇ, ಒಟಿಟಿಗಳ ಜಾಹೀರಾತು ಪ್ರಮಾಣದಲ್ಲಿ ಶೇ 30–40ರಷ್ಟು ಕುಸಿತ ಆಗಿರುವುದೂ ಸತ್ಯ. ಈ ಕಾರಣದಿಂದಾಗಿಯೇ ಈಗ ಭಾರತದಲ್ಲಿ ಮಾರುಕಟ್ಟೆ ವರ್ಧಿಸಿಕೊಂಡಿರುವ ಬಹುತೇಕ ಒಟಿಟಿಗಳು ಚಿತ್ರಮಂದಿರದಲ್ಲಿ ಬಿಡುಗಡೆಯಾಗಿರುವ ಸಿನಿಮಾಗಳನ್ನೇ ಆಯ್ಕೆಗೆ ಪರಿಗಣಿಸುವುದು ವ್ಯಾಪಕವಾಗಿದೆ.

ಕೆಲವೇ ವರ್ಷಗಳ ಹಿಂದೆ ಪುನೀತ್ ರಾಜ್‌ಕುಮಾರ್ ಅವರ 'ಪಿಆರ್‌ಕೆ' ನಿರ್ಮಾಣ ಸಂಸ್ಥೆಯ ಕನ್ನಡ ಸಿನಿಮಾಗಳನ್ನು ಒಟಿಟಿ ಕಣ್ಣುಮುಚ್ಚಿಕೊಂಡು ಕೊಳ್ಳುತ್ತಿತ್ತು. ಈಗ ಪರಿಸ್ಥಿತಿ ಹಾಗಿಲ್ಲ ಎನ್ನುವುದನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರೇ ಸ್ಪಷ್ಟಪಡಿಸಿದರು. ಅಷ್ಟೇ ಅಲ್ಲ, ಅವರು ಇದೇ ನಿರ್ಮಾಣ ಸಂಸ್ಥೆಯ 'ಆಚಾರ್ ಅಂಡ್ ಕೋ.' ಕನ್ನಡ ಸಿನಿಮಾವನ್ನು ಚಿತ್ರಮಂದಿರಗಳಲ್ಲಿ ಬಿಡುಗಡೆ ಮಾಡುವುದು ಅನಿವಾರ್ಯವಾಯಿತು.

ಪ್ರತಿ ವರ್ಷವೂ 'ಆರ್‌ಆರ್‌ಆರ್', 'ಕೆಜಿಎಫ್' ರೀತಿಯ ಸಿನಿಮಾಗಳು ಸಿಗಬೇಕಲ್ಲ ಎನ್ನುವ ಪ್ರಶ್ನೆಯಂತೂ ಒಟಿಟಿ ವಹಿವಾಟು ನೆಚ್ಚಿಕೊಂಡವರಲ್ಲಿ ಇದೆ. ■



'ಹಾರ್ಟ್ ಆಫ್ ಸ್ಟೋನ್' ಚಿತ್ರದಲ್ಲಿ ಆಲಿಯಾ

## ಆಲಿಯಾಗೆ ಹಾಲಿವುಡ್ ಸುಖಾನುಭವ

'ರಾಕಿ ಔರ್ ರಾಣಿ ಕಿ ಪ್ರೇಮ್ ಕಹಾನಿ' ಹಿಂದಿ ಸಿನಿಮಾ ಓಡಿತೋ ಮಲಗಿತೋ ಎನ್ನುವ ಜಿಜ್ಞಾಸೆಯಲ್ಲಿರುವಾಗಲೂ ಆಲಿಯಾ ಭಟ್ ನಗುತ್ತಾ ಇದ್ದಾರೆ. ಆ ಸಿನಿಮಾದಲ್ಲಿ ಅವರು ನಾಯಕಿ ಎನ್ನುವುದು ಆ ನಗುವಿಗೆ ಕಾರಣವಲ್ಲ, ಅವರು 'ಹಾರ್ಟ್ ಆಫ್ ಸ್ಟೋನ್' ಸಿನಿಮಾ ಮೂಲಕ ಹಾಲಿವುಡ್ ಪ್ರವೇಶಿಸುತ್ತಿರುವುದು ಅದರ ಗುಟ್ಟು. ಬ್ರಿಟಿಷ್ ಚಿತ್ರಕರ್ಮಿ ಟಾಮ್ ಹಾರ್ಪರ್ ನಿರ್ದೇಶನದ 'ಹಾರ್ಟ್ ಆಫ್ ಸ್ಟೋನ್'ನಲ್ಲಿ ಗ್ಯಾಲ್ ಗ್ಯಾಡೊಟ್, ಜೆಮಿ ಡೋರ್ನನ್ ಕೂಡ ಅಭಿನಯಿಸಿದ್ದಾರೆ. ಕೆಯಾ ಧವನ್ ಎನ್ನುವ ಪಾತ್ರಕ್ಕೆ ಆಲಿಯಾ ಬಣ್ಣ ಹಚ್ಚಿದ್ದಾರೆ.

'ಹಿಂದಿ ಸಿನಿಮಾಗಳಂತೆಯೇ ಹಾಲಿವುಡ್‌ನಲ್ಲೂ ಪರಿಕಲ್ಪನೆ, ನಿರ್ದೇಶನ, ತಂತ್ರಜ್ಞರ ತಂಡಗಳು ಕೆಲಸ ಮಾಡುತ್ತವೆ. ಆದರೆ, ಅಲ್ಲಿನ ಇಂಗ್ಲಿಷ್ ಬೇರೆ ತರಹ. ನನಗೆ ಇಂಗ್ಲಿಷ್ ಮಾತಾಡುವುದು ಚೆನ್ನಾಗಿ ಗೊತ್ತಿದ್ದರೂ ಆಂಗ್ಲರ ಶೈಲಿ ಭಿನ್ನ. ಸಿನಿಮಾಗಳಲ್ಲಿ ಹಿಂದಿ ಭಾಷೆಯನ್ನೇ ಹೆಚ್ಚಾಗಿ ಬಳಸಿ ಅಭ್ಯಾಸ. ಇದರಿಂದಾಗಿ ಮೊದಮೊದಲು ಚಿತ್ರೀಕರಣಕ್ಕೆ ಹೋದಾಗ ನನಗೆ ಇಂಗ್ಲಿಷ್ ಮಾತಾಡುವುದು ಕಷ್ಟವೆನಿಸಿತು. ಕ್ರಮೇಣ ಒಗ್ಗಿಕೊಂಡೆ. ಸದಾ ಏನಾದರೊಂದನ್ನು ಕಲಿಯುತ್ತಿರುವುದು ಖುಷಿಯ ವಿಷಯವೇ ಅಲ್ಲವೇ' ಎಂದು ಆಲಿಯಾ ಇನ್ನೊಂದು ನಗುವನ್ನು ಮೂಡಿಸಿಕೊಂಡೇ ಕೇಳುತ್ತಾರೆ.

'ದಿ ಏರೋನಾಟ್ಸ್', 'ವೈಲ್ಡ್ ರೋಸ್' ತರಹದ ಚಿತ್ರಗಳನ್ನು ನಿರ್ದೇಶಿಸಿರುವ ಟಾಮ್ ಹಾರ್ಪರ್ ಪ್ರತಿಭೆಯ ಕುರಿತೂ ಆಲಿಯಾ ಮೆಚ್ಚುಗೆ ವ್ಯಕ್ತಪಡಿಸಿದರು. ಎರಡು ತಾಸು ಅವಧಿಯ 'ಹಾರ್ಟ್ ಆಫ್ ಸ್ಟೋನ್' ಆಗಸ್ಟ್ 11ರಿಂದ ಒಟಿಟಿಗಳಲ್ಲಿ ಬಿಡುಗಡೆಯಾಗಲಿದೆ. ನೆಟ್‌ಫ್ಲಿಕ್ಸ್ ಇದರ ಪ್ರಸಾರದ ಹಕ್ಕನ್ನು ಪಡೆದುಕೊಂಡಿದೆ. ಒಟಿಟಿ ನೋಡುಗರ ಸಂಖ್ಯೆಯಲ್ಲಿ ಭಾರತೀಯರು ಗಣನೀಯ ಪ್ರಮಾಣದಲ್ಲಿ ಇರುವುದರಿಂದಲೇ ಆಲಿಯಾ ತರಹದ ಇಲ್ಲಿನ ನಟಿಯರಿಗೆ ಅಲ್ಲಿಯೂ ಬೇಡಿಕೆ ಬರುತ್ತಿದೆ. ■